# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರು ವಾರ್ಡ್ ಸಂಖ್ಯೆ: 89- ಜೋಗುಪಾಳ್ಯ ವಾರ್ಡಿನ ದಿನಾಂಕ: 04.04.2022 ರಂದು ನಡೆದ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: **ಚು12(5)ಪಿಆರ್/35/2020-21/21-09-2020** ರ ಆದೇಶದಂತೆ ದಿನಾಂಕ: 04.04.2022 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ **ಜೋಗುಪಾಳ್ಯ ವಾರ್ಡ್ ಸಂಖ್ಯೆ-89 ಸಭೆ ಕನೋಪಿ ಹೋಟೆಲ್ ಪಿ ಯು ಕಟ್ಟಡ 2ನೇ ಮಹಡಿ ಎಂ.ಜಿ ರಸ್ತೆ, ಬೆಂಗಳೂರು –** ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಮಾನ್ಯ ಶ್ರೀ.ಎನ್.ಎ.ಹ್ಯಾರಿಸ್ ಶಾಸಕರು ಶಾಂತಿನಗರ ವಿಧಾನ ಸಭಾ ಕ್ಷೇತ್ರ ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿ ಸಭೆಯು ದಿನಾಂಕ:04.04.2022ರಂದು ನಡೆಯಿತು.

### ಸಭೆಗೆ ಹಾಜರಿದ್ದವರ ವಿವರಗಳು

1) ಮಾನ್ಯ ಶ್ರೀ.ಎನ್.ಎ.ಹ್ಯಾರಿಸ್ ಶಾಸಕರು ಶಾಂತಿನಗರ ವಿಧಾನ ಸಭಾ ಕ್ಷೇತ್ರ, ಅಧ್ಯಕ್ಷರು.
2) ಶ್ರೀ.ಬಿ ಮಹೇಶ್ ಕುಮಾರ್, ನೋಡಲ್ ಅಧಿಕಾರಿ.ಸಹಾಯಕ ನಿಯಂತ್ರಕರು ಹಣಕಾಸು (ಪೂರ್ವ)
3) ಶ್ರೀ. ಮೂರ್ತಿ, ವಾರ್ಡ್ ಸಮಿತಿಯ ಕಾರ್ಯದರ್ಶೀ, ಸಹಾಯಕ ಅಭಿಯಂತರರು ಹಾಗೂ ಬಿಬಿಎಂಪಿ ಇತರ ವಿಭಾಗಗಳ ಅಂದರೆ, ಅರಣ್ಯ ಆರೋಗ್ಯ, ಕಾಮಗಾರಿ, ಘನತಾಜ್ಯ ವಿಭಾಗ, ಅಧಿಕಾರಿಗಳು, ಬೆಸ್ಕಾಂ ಮತ್ತು BWSSB ಅಧಿಕಾರಿಗಳು ಹಾಜರಿದ್ದರು.
4) ವಾರ್ಡ್ ಸಮಿತಿ ಸದಸ್ಯರಾದ, ಶ್ರೀಮತಿ ಗಾಯತ್ರಿ, ಶ್ರೀಮತಿ ವಿಜಯಲಕ್ಷ್ಮೀ, ಶ್ರೀಮತಿ ಆಶಾ ಆಲ್ವೀನ್ ಮತ್ತು ಶ್ರೀ ಹೇಮಂತ್‌ನಾಗ್ ರವರು ಸಭೆಗೆ ಹಾಜರಿದ್ದರು,

ಸಭೆಯನ್ನು ಪ್ರಾರಂಭಿಸುತ್ತಾ ಮೊದಲನೆಯದಾಗಿ ನೋಡಲ್ ಅಧಿಕಾರಿಯವರು ಸಭೆಗೆ ಅಧ್ಯಕ್ಷತೆಯನ್ನು ವಹಿಸಿದ್ದ ಮಾನ್ಯ ಶಾಸಕರು ಮತ್ತು ಹಾಜರಿದ್ದ ಅಧಿಕಾರಿಗಳನ್ನು ಮತ್ತು ಅಹ್ವಾನಿತರಾಗಿದ್ದ ಸ್ಥಳೀಯರು ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ವಾರ್ಡ್ ಸಮಿತಿ ಸಭೆಯಲ್ಲಿ ನೀಡಿರುವ ಈ ಕೆಳಕಂಡ ವಾರ್ಡಿನ ಸಮಸ್ಯೆಗಳ ಬಗ್ಗೆ ಚ್ರರ್ಚಿಸಲಾಯಿತು.

1) ಜೋಗುಪಾಳ್ಯ ವಾರ್ಡ್ ಜಿ ಮುಖ್ಯ ಬೀದಿಯಲ್ಲಿ ಇರುವ ಉರ್ದು ಮತ್ತು ಅಂಗನವಾಡಿ ಶಾಲೆಯಲ್ಲಿ ಕಾವೇರಿ ನೀರು ಸರಿಯಾಗಿ ಸರಬರಾಜು ಆಗಿಲ್ಲದಿರುವುದರ ಬಗ್ಗೆ ಶಾಲೆಯ ಸಿಬ್ಬಂಧ್ಧಿ ವರ್ಗದವರು ತಿಳಿಸಿದರು, AEE BWSSB ಕೂಡಲೆ ಕ್ರಮ ವಹಿಸಲು ಸೂಚಿಸಲಾಗಿದೆ.

2) ಶ್ಯಾಮನ್ನ ಗೌಡ ಲೇಔಟ್ 2ನೇ ಅಡ್ಡ ರಸ್ತೆ ಓಂ ಶಕ್ತಿ ದೇವಸ್ಥಾನ ಹತ್ತಿರ ಈ ರಸ್ತೆಯಲ್ಲಿ ಒಳಚರಂಡಿ (Drinage) ಬ್ಲಾಕ್ ಆಗುವುದರ ಬಗ್ಗೆ ಅಲ್ಲಿ ವಾಸಿಸುವ ಸ್ಥಳೀಯರು ತಿಳಿಸಿರುತ್ತಾರೆ- AEE BWSSB ಕೂಡಲೆ ಕ್ರಮ ವಹಿಸಲು ಸೂಚಿಸಲಾಗಿದೆ.

3) ಜಿ ನಂ.15 ರಸ್ತೆ ಮೆಟ್ರೊ ಸ್ಟೇಷನ್ ಹತ್ತಿರ ಜೋಗುಪಾಳ್ಯ ಈ ರಸ್ತೆಯಲ್ಲಿಯು ಆಗಾಗ್ಗೆ ಒಳಚರಂಡಿ (Drinage) ಬ್ಲಾಕ್ ಆಗುತ್ತಿದ್ದು ಇದರ ಬಗ್ಗೆ AEE BWSSB ರವರಿಗೆ ದೂರು ನೀಡಿದ್ದರು ಸಹ ಇದನ್ನು BWSSB ರವರು ಸರಿಪಡಿಸದ ಕಾರಣ ಇದನ್ನು ಸರಿಪಡಿಸಬೇಕೆಂದು ಸ್ಥಳೀಯರು ತಿಳಿಸಿದರು-AEE BWSSB ಕೂಡಲೆ ಕ್ರಮ ವಹಿಸಲು ಸೂಚಿಸಲಾಗಿದೆ.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯಗಳನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಪಟ್ಟ ಅಧಿಕಾರಿಗಳು ಕೈಗೊಂಡ ಕ್ರಮದ ವರದಿಯನ್ನು ನೀಡಲು ಸೂಚಿಸಿ. ಸಭೆಯನ್ನು ಮುಕ್ತಾಯಗೊಳಿಸಿದರು.

ನೋಡೆಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-89- ಜೋಗುಪಾಳ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಪ್ರತಿಯನ್ನು</u>

1) ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.
3) ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
4) ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
5) ವಾಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
6) ಕಛೇರಿ ಪ್ರತಿ.